ದಿನಾಂಕ 08-01-2024 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** 6, 8 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಸ್ ಡಿ ಜೆ ವಕೀಲರಿಂದ.

ಕಾಳಪ್ಪ, ಕೇದಾರಪ್ಪ ಮತ್ತು ಹನುಮಂತ ರವರು ಅಣ್ಣ ತಮ್ಮಂದಿರು ಎಂದರೆ ಸರಿ. ಮೂರು ಜನರು ತೀರಿಕೊಂಡಿದ್ದಾರೆ ಎಂದರೆ ಸರಿ. ಕಾಳಪ್ಪ ನನ್ನ ತಂದೆ ಎಂದರೆ ಸರಿ. ನನ್ನ ತಂದೆಯಾದ ಕಾಳಪ್ಪನು ಜೀವಂತ ಇದ್ದಾಗ ನನ್ನ ತಂದೆ ಹಾಗೂ ಆತನ ಇಬ್ಬರು ಸಹೋದರರು ದಾವಾ 3 ಎ ಆಸ್ತಿಯನ್ನು ಜಂಟಿಯಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಕಾಳಪ್ಪನು ಮೂರು ಜನ ಸಹೋದರರಲ್ಲಿ ಹಿರಿಯ ಎಂದರೆ ಸರಿ. ಸದರಿ ಮೂರು ಜನರ ಪೈಕಿ ನನ್ನ ತಂದೆಯಾದ ಕಾಳಪ್ಪನೆ ಮೊದಲು ತೀರಿಕೊಂಡನು ಎಂದರೆ ಸರಿ. ಮೂರು ಜನ ಸಹೋದರರಲ್ಲಿ ನನ್ನ ತಂದೆಯೇ ಮನೆಯ ವ್ಯವಹಾರ ಮಾಡುತ್ತಿದ್ದನು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯಾದ ಕಮಲಮ್ಮ ರವರು ಮನೆಯ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಾಯಿಯು ತನ್ನ ಇಬ್ಬರು ಮೈದುನರನ್ನು ನೋಡಿಕೊಳ್ಳುತ್ತಿದ್ದರು ಎನ್ನುವುದು ಗೊತ್ತಿಲ್ಲ. ನನ್ನ ತಂದೆ ಮತ್ತು ಆತನ ಸಹೋದರರು ಒಂದೇ ಮನೆಯಲ್ಲಿ ಇದ್ದರು ಎಂದರೆ ಸಾಕ್ಷಿಯು ತನಗೆ ತಿಳುವಳಿಕೆ ಬಂದ ನಂತರದಿಂದ ತನ್ನ ಪ್ರಕಾರ ಅವರು ಬೇರೆ ಬೇರೆ ಇದ್ದರು ಎನ್ನುತ್ತಾರೆ. ನನ್ನ ತಂದೆ ಮತ್ತು ಆತನ ಸಹೋದರರು ಬೇರೆ ಬೇರೆ ಇದ್ದರು ಎನ್ನುವುದಕ್ಕೆ ನ್ಯಾಯಾಲಯಕ್ಕೆ ದಾಖಲು ಹಾಜರುಪಡಿಸಿಲ್ಲ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಮನೆತನಕ್ಕೆ ಹಿರಿಯ ಸೂಸೆ ಆಗಿದ್ದರಿಂದ ಅವರ ಹೆಸರು ದಾವಾ ಆಸ್ತಿ ಸಂಖ್ಯೆ 3 ಎ ಗೆ ದಾಖಲಾಯಿತು ಎಂದರೆ ಸಾಕ್ಷಿಯು ದಾಖಲೆಗಳು ತನ್ನ ತಾಯಿಯ ಹೆಸರಲ್ಲಿಯೇ ಇವೆ ಎನ್ನುತ್ತಾರೆ. ನನ್ನ ತಾಯಿಯು ನನಗೆ ದಾವಾ ಆಸ್ತಿ 3 ಎ ರಲ್ಲಿ ನನ್ನ ಚಿಕ್ಕಪ್ಪಂದಿರಿಗೂ ಪಾಲು ಇದೆ ಎಂದು ಹೇಳುತ್ತಿದ್ದರು ಎನ್ನುವುದು ಗೊತ್ತಿಲ್ಲ. ನನ್ನ ತಾಯಿಗೆ 85 ವರ್ಷ ಆಗಿವೆ ಎಂದರೆ ಸರಿ. ನನ್ನ ತಾಯಿಯ ಮೈದುನರು ನನ್ನ ತಾಯಿಗೆ ತೋರಿಸಿದ ಪ್ರೀತಿ, ವಿಶ್ವಾಸದ ಕಾರಣದಿಂದ ಹಾಗೂ

ಅದು ಹಾಗೇಯೇ ಮುಂದುವರೆಯ ಬೇಕೆಂಬ ಆಸೆಯಿಂದ ದಾವಾ ಆಸ್ತಿ ಸಂಖ್ಯೆ 3 ಎ ರಲ್ಲಿ ಮೂರು ಭಾಗಗಳನ್ನಾಗಿ ಮಾಡಿ ದಿನಾಂಕ 04-09-2018 ರಂದು ತಾನೇ ಮುಂದು ನಿಂತು ನೋಂದಾಯಿತ ವಾಟಣಿ ಪತ್ರ ಮಾಡಿಕೊಟ್ಟಿರುತ್ತಾಳೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಚಿಕ್ಕಪ್ಪಂದಿರಿಗೆ ನೀಡಿರುವ ಜಮೀನುಗಳನ್ನು ಅವರೇ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎನ್ನುವುದು ಗೊತ್ತಿಲ್ಲ. ನನ್ನ ತಾಯಿ ಮಾಡಿಕೊಟ್ಟ ಪಾಲಿನ ಪ್ರಕಾರ ನನ್ನ ಚಿಕ್ಕಪ್ಪಂದಿರೆ ಅವರಿಗೆ ಬಂದ ಹಿಸ್ಸೆಗಳಲ್ಲಿ ಕಬ್ಜಾ ವಹಿವಾಟಿ ಹೊಂದಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಾಯಿಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ ಹಾಗೂ ನನಗೆ ಯಾವುದೇ ಮಾಹಿತಿ ಇಲ್ಲ ಹಾಗೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(**ನ್ಯಾಯಾಲಯದ ಟಿಪ್ಪಣಿ:** 1 ರಿಂದ 5 ಹಾಗೂ 7(a) ಯಿಂದ 7(d) ಪ್ರತಿವಾದಿಗಳ ಪರ ದಾಖಲಾಗಿರುವ ಮೇಲಿನ ಪಾಟೀ ಸವಾಲನ್ನೇ ಮುಂದುವರೆದ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳಲು, 6, 8 ಹಾಗೂ 9 ನೇ ಪ್ರತಿವಾದಿಗಳ ಪರ ಮಾನ್ಯ ವಕೀಲರು ಕೋರಿದಂತೆ ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲಾಯಿತು.)

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.